# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



Spend LESS and get MORE publicity

BENEFITS OF ADVERTISING
in Local Leading HAMPI TIMES Newspaper

1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options

ಹಂಪಿ ಟೈಮ್ಸ್

CALL US : 9448633038

Email us Your Advertisement Content to : hampitimes@gmail.com



ಸಂಪುಟ:01 • ಸಂಚಿಕೆ:163 • ನೋಂದಣಿ ನಂ.:KARKAN27911 • ವಿಜಯನಗರ • 22.11.2023 • ಬುಧವಾರ • ಪುಟ:04 • ಬೆಲೆ:2

Volume:01 • Issue:163 • Reg.No:KARKAN27911 • VIJAYANAGARA • 22.11.2023 • Wednesday • Page:04 • Rs:2




# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



Spend LESS and get MORE publicity
BENEFITS OF ADVERTISING
in Local Leading HAMPI TIMES Newspaper
1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options
ಹಂಪಿ ಟೈಮ್ಸ್
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 • ಸಂಚಿಕೆ:163 • ನೋಂದಣಿ ನಂ.:KARKAN27911 • ವಿಜಯನಗರ • 22.11.2023 • ಬುಧವಾರ • ಪುಟ:04 • ಬೆಲೆ:2
Volume:01 • Issue:163 • Reg.No:KARKAN27911 • VIJAYANAGARA • 22.11.2023 • Wednesday • Page:04 • Rs:2


# ಮನುಷ್ಯನ ದುರ್ಗುಣಗಳಿಂದ ಪ್ರಕೃತಿ ನಾಶ

**ಲಿಖಿತ ಜಪಯಜ್ಞ ಧರ್ಮಸಭೆಯಲ್ಲಿ ಡಾ.ನಾಲ್ವಡಿ ಶಾಂತಲಿಂಗ ಶಿವಚಾರ್ಯರು ಅಭಿಮತ । ಲಿಖಿತ ಜಪಯಜ್ಞ ಧರ್ಮ ಸಂದೇಶ ಸಮಾರಂಭ**

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪ್ರಕೃತಿ ಸಮಾಜಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡಿದೆ, ಗಾಳಿ, ಬೆಳಕು, ನೀರು ಸೇರಿದಂತೆ ಏನೆಲ್ಲ ನೀಡಿದ್ದರೂ, ಮಾನವರು ಅದನ್ನು ಉಳಿಸಿಕೊಳ್ಳುವುದರ ಬದಲಿಗೆ ಅದರ ನಾಶ ಮಾಡುವುದರಲ್ಲಿಯೇ ತೊಡಗಿಕೊಂಡಿದ್ದಾನೆ ಎಂದು ತಪೋಕ್ಷೇತ್ರ ಕಣ್ವಕುಪ್ಪೆ ಮಠದ ಡಾ.ನಾಲ್ವಡಿ ಶಾಂತಲಿಂಗ ಶಿವಚಾರ್ಯ ಮಹಾಸ್ವಾಮೀಜಿ ಹೇಳಿದರು.

ಪಟ್ಟಣದ ಕೂಡ್ಲಿಗಿ ರಸ್ತೆಯಲ್ಲಿರುವ ಶ್ರೀರೇಣುಕಾ ವಿದ್ಯಾಮಂದಿರದ ಆವರಣದಲ್ಲಿ ಸೋಮವಾರ ರಾತ್ರಿ ಎಡಿಯೂರು ಶ್ರೀಸಿದ್ದಲಿಂಗೇಶ್ವರ ವಿದ್ಯಾಪೀಠ ಹಾಗೂ ಜಗದ್ಗುರು ರೇಣುಕಾಚಾರ್ಯ ದೇವಸ್ಥಾನ ಕಮಿಟಿ ಹಮ್ಮಿಕೊಂಡಿದ್ದ ಲಿಖಿತ ಜಪಯಜ್ಞ ಕುರಿತು ಧರ್ಮ ಸಂದೇಶ ಸಮಾರಂಭದ ದಿವ್ಯ ಸಾನ್ನಿಧ್ಯವಹಿಸಿ ಮಾತನಾಡಿದರು. ನಾವು ಪ್ರಕೃತಿಯಿಂದ ಪಡೆದದ್ದೇ ಹೆಚ್ಚು ನಾವು ಮರಳಿ ಏನನ್ನು ನೀಡಲಿಕ್ಕಾಗಿಲ್ಲ. ಮನುಷ್ಯ ತನಗೆ ಕಷ್ಟ ಬಂದಾಗ ರಕ್ಷಣೆಗಾಗಿ ದೇವರ ಮೊರೆ ಹೋಗುತ್ತಾನೆ. ಆದರೆ, ಸಮಸ್ಯೆ ಪರಿಹಾರವಾಗುತ್ತಿದ್ದಂತೆ ಭಗವಂತನನ್ನು ಮರೆಯುವುದು ಮನುಷ್ಯನ ಅವಗುಣವಾಗಿದೆ. ನಿತ್ಯ ನಿರಂತರ ಗಾಳಿ, ಬೆಳಕು, ನೀರು, ಕಾಲ ಕಾಲಕ್ಕೆ ಮಳೆ, ಬಿಸಿಲು, ಚಳಿ ಸೇರಿದಂತೆ ನೈಸರ್ಗಿಕವಾಗಿ ಉಚಿತ ಕೊಡುಗೆಗಳನ್ನು ನೀಡುವ ಭಗವಂತನನ್ನು ಸದಾ ಆತ್ಮದಲ್ಲಿ ಸ್ಮರಿಸುವ ಪರಿಪಾಟವನ್ನು ರೂಢಿಸಿಕೊಳ್ಳಬೇಕು. ಶಿವಪಂಚಾಕ್ಷರಿ ಮಹಾಮಂತ್ರದ ಲಿಖಿತ ಜಪಯಜ್ಞವಾಗಿದೆ ಎಂದರು. ಎಲ್ಲರೂ ನಿರಂತರ ನಿತ್ಯ ಶಿವಮಂಚಾಕ್ಷರಿ ಮಂತ್ರ ಜಪಿಸಬೇಕು ಎಂದು ತಿಳಿಸಿದರು.



ಹಗರಿಬೊಮ್ಮನಹಳ್ಳಿ ಪಟ್ಟಣದ ಶ್ರೀರೇಣುಕ ವಿದ್ಯಾಮಂದಿರದಲ್ಲಿ ತಪೋಕ್ಷೇತ್ರ ಕಣ್ವಕುಪ್ಪೆಯ ಡಾ.ನಾಲ್ವಡಿಶಾಂತಲಿಂಗ ಸ್ವಾಮೀಜಿಯವರು ಜಪಯಜ್ಞ ಪುಸ್ತಕ ಬಿಡುಗಡೆಮಾಡಿದರು.

ಹರಿಹರದ ಶಿವಯೋಗಿ ಕಂಬಳಿಮಠ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿ, ಒಂದು ಮಠದಿಂದ ಸಮಾಜದಲ್ಲಿ ಸಂಸ್ಕಾರ, ಸಂಸ್ಕೃತಿಯ ನೀತಿಪಾಠವನ್ನು ಹೇಳಲಾಗುತ್ತೆ. 2019ರಲ್ಲಿಯೇ ಕೇದಾರನಾಥ ಪೀಠದಲ್ಲಿ ನಡೆಯುವಂತ ಸಂಸ್ಕಾರ ಅಧಿಕಾರ ಸ್ವಾಮೀಜಿ ಡಾ.ನಾಲ್ವಡಿ ಶಾಂತಲಿಂಗ ಶಿವಚಾರ್ಯರವರಿಗೆ ಅಂದೇ ಅದ್ಭುತವಾದ ಅನುಷ್ಠಾನ, ಶಕ್ತಿ ಸ್ವಾಮೀಜಿಯವರಿಗಿತ್ತು ಎಂದರು. ಮಾನವ ಜನ್ಮ ಸಾರ್ಥಕವಾಗಲು ಲಿಖಿತ ಜಪಯಜ್ಞ ಬರವಣಿಗೆಯಾಗಬೇಕು. ಇದರ ಗುರಿಯನ್ನು ನಾವು ನೀರಿಕ್ಷೆ ಮೀರಿಯೂ ಸಾಧನೆಯಾಗಿದೆ. ಇಂದಿಗೆ 27 ಕೋಟಿ ಜಪಯಜ್ಞ ಬರೆಯಲಾಗುತ್ತಿದೆ ಎಂದು ಆಶ್ಚರ್ಯ ವ್ಯಕ್ತಪಡಿಸಿದರು.

ಎಡಿಯೂರು ಶ್ರೀಸಿದ್ದಲಿಂಗೇಶ್ವರ ವಿದ್ಯಾಪೀಠದ ಕಾರ್ಯದರ್ಶಿ ತಿಪ್ಪೇಸ್ವಾಮಿ ಸ್ವಾಗತಿಸುತ್ತಾ, ಕಣ್ವಕುಪ್ಪೆ ಮಠದ ಸ್ವಾಮೀಜಿಗಳ ಪವಾಡಗಳನ್ನು ಹಾಗೂ ತಮ್ಮ ಜೀವನದಲ್ಲಿ ನಡೆದ ಅನುಭವಗಳನ್ನು ವಿವರಿಸಿದರು.

ಇದೇ ವೇಳೆ ಸ್ವಾಮೀಜಿಯವರು ಲಿಖಿತ ಜಪಯಜ್ಞ ಪುಸ್ತಕವನ್ನು ಬಿಡುಗಡೆಮಾಡಿದರು.

ಶ್ರೀಹಾಲಸ್ವಾಮಿ ಮಠದ ಹಾಲಸಿದ್ದೇಶ್ವರ ಸ್ವಾಮೀಜಿಯವರು ಸಹ ಸಾನ್ನಿಧ್ಯ ವಹಿಸಿದ್ದರು.

ಮುಖಂಡರಾದ ಕಿನ್ನಾಳ್ ಸುಭಾಷ್, ಮಲ್ಲಿಕಾರ್ಜುನ ನಾಯ್ಕ್, ನೆರೆಗಲ್ ಕೊಟ್ರೇಶ್, ನೇತಾಜಿಗೌಡ್ರು, ಮಗಿಮಾವಿನಹಳ್ಳಿ ಹುಚ್ಚಪ್ಪ, ಬಿ.ಜಿ.ಬಡಿಗೇರ್, ಮಲ್ಕಿ ಒಡೆಯರು, ಗೋಣೆಪ್ಪ, ಪ್ರಸಾದ್, ಬಸವನಗೌಡ್ರು, ಶ್ರೀನಿವಾಸ ಶೆಟ್ಟಿ, ಇಂದುಮತಿ ತಿಪ್ಪೇಸ್ವಾಮಿ, ಸಂಸ್ಥೆಯ ಶಿಕ್ಷಕ ಶಿಕ್ಷಕಿಯರು ಮತ್ತು ಸಿಬ್ಬಂದಿವರ್ಗದವರಿದ್ದರು. ಸಂಗೀತ ಶಿಕ್ಷಕಿ ಶಾರದ ಮಂಜುನಾಥ ಹಾಗೂ ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶಿಕ್ಷಕ ಬೆಟ್ಟಪ್ಪ ನಿರ್ವಹಿಸಿದರು.

## ಮೈಕ್ರೋ ನ್ಯೂಸ್

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

### ನ.22ರಂದು ಅರಣ್ಯ ಸಚಿವರ ಪ್ರವಾಸ

**ಹಂಪಿ ಟೈಮ್ಸ್ ಹೊಸಪೇಟೆ**

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಾದ ಈಶ್ವರ ಬಿ. ಖಂಡ್ರೆ ಅವರು ನ.22ರಂದು ವಿಜಯನಗರ ಜಿಲ್ಲೆಯಲ್ಲಿ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ನ.22ರಂದು ಬೆಳಿಗ್ಗೆ11 ಗಂಟೆಗೆ ಹೊಸಪೇಟೆಗೆ ಆಗಮಿಸಿ, ನಗರದ ಸಿದ್ಧಿಪ್ರಿಯ ಕಲ್ಯಾಣ ಮಂಟಪ ಹತ್ತಿರದ ರಿಂಗ್ ರೋಡ್ ನಲ್ಲಿ ನೂತನವಾಗಿ ನಿರ್ಮಾಣಗೊಂಡ ವಿಶ್ವಗುರು ಶ್ರೀ ಬಸವೇಶ್ವರ ಅಶ್ವಾರೂಢ ಪುತ್ಥಳಿ ಮತ್ತು ವೃತ್ತದ ಲೋಕಾರ್ಪಣಾ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ಮಧ್ಯಾಹ್ನ 12ಕ್ಕೆ ಹೊಸಪೇಟೆಯ ಅರಣ್ಯ ಭವನದಲ್ಲಿ ನಡೆಯುವ ಅರಣ್ಯ ಇಲಾಖೆಯ ಪರಾಮರ್ಶನಾ ಸಭೆಯಲ್ಲಿ ಭಾಗವಹಿಸುವರು. ಮಧ್ಯಾಹ್ನ 1 ಗಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ತಿಳಿಸಿದ್ದಾರೆ

### ಹೈನುಗಾರಿಕೆಗೆ ಸಹಾಯಧನ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ 2023–24ನೇ ಸಾಲಿನಲ್ಲಿ ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ಉಳಿಕೆ ಅನುದಾನದಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಅನುಷ್ಠಾನಗೊಳಿಸಲು ಫಲಾನುಭವಿಗಳ ಆಯ್ಕೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಯಡಿ ಒಂದು ಮಿಶ್ರತಳಿ ಹಸು/ ಸುಧಾರಿತ ಎಮ್ಮೆ ಘಟಕಕ್ಕೆ ಒಟ್ಟು ಮೊತ್ತ ರೂ. 65,000, ಇದರಲ್ಲಿ ಶೇ.90ರಷ್ಟು ಅಂದರೆ ರೂ. 58,500 ಸಹಾಯಧನ ಮತ್ತು ಉಳಿಕೆ ಮೊತ್ತ ರೂ. 6,500 ಫಲಾನುಭವಿಯ ವಂತಿಕೆ ಅಥವಾ ಬ್ಯಾಂಕ್ ಸಾಲವಾಗಿದೆ. ಯೋಜನೆಯಡಿ ವಿಜಯನಗರ ಹಾಗೂ ಹಗರಿಬೊಮ್ಮನಹಳ್ಳಿ ವಿಧಾನಸಭಾಕ್ಷೇತ್ರಕ್ಕೆ ತಲಾ 02 ರಂತೆ ಪರಿಶಿಷ್ಟ ಜಾತಿಯವರಿಗೆಒಟ್ಟು4ಗುರಿನಿಗದಿಪಡಿಸಲಾಗಿದೆ. ಪರಿಶಿಷ್ಟ ಪಂಗಡದವರಿಗೆವಿಜಯನಗರಕ್ಕೆ 3 ಹಾಗೂ ಹಗರಿಬೊಮ್ಮನಹಳ್ಳಿಗೆ 2 ಸೇರಿ ಒಟ್ಟು 5 ಗುರಿ ನಿಗದಿಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಸರ್ಕಾರದ ನಿಯಮಗಳಂತೆ ಮಹಿಳೆಯರಿಗೆಶೇ.33ರಷ್ಟು, ವಿಶೇಷ ಚೇತನರಿಗೆ ಶೇ.3ರ ಆದ್ಯತೆ ನೀಡಲಾಗುವುದು.

ಅರ್ಜಿ ಸಲ್ಲಿಸಲು ನ.30 ಕೊನೆಯ ದಿನವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ, ಪಶು ಆಸ್ಪತ್ರೆ, ಹೊಸಪೇಟೆ ಇಲ್ಲಿಗೆ ಸಂಪರ್ಕಿಸಬಹುದಾಗಿದೆ ಎಂದು ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅಪ್ರೆಂಟಿಶ್ ಮೇಳ: 88 ಅಭ್ಯರ್ಥಿಗಳ ಆಯ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**

ಹಗರಿಬೊಮ್ಮನಹಳ್ಳಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಸೋಮವಾರ ನಡೆದ ವಿಜಯನಗರ ಜಿಲ್ಲಾ ಮಟ್ಟದ ಅಪ್ರೆಂಟಿಶ್ ಮೇಳದಲ್ಲಿ 88 ಅಭ್ಯರ್ಥಿಗಳು ಅಪ್ರೆಂಟಿಶಿಪ್ ತರಬೇತಿಗೆ ಆಯ್ಕೆಯಾಗಿದ್ದಾರೆ ಎಂದು ಸಂಸ್ಥೆಯ ಪ್ರಭಾರ ಪ್ರಾಚಾರ್ಯರು ಹಾಗೂ ಶಿಶಿಕ್ಷು ನೋಡಲ್ ಅಧಿಕಾರಿ ಮೊಹನ ಮುರಾಳ ಅವರು ತಿಳಿಸಿದ್ದಾರೆ.

ಜಿಲ್ಲಾ ಮಟ್ಟದ ಅಪ್ರೆಂಟಿಶ್ ಮೇಳಕ್ಕೆ ಹಗರಿಬೊಮ್ಮನಹಳ್ಳಿ ಶಾಸಕರಾದ ಕೆ.ನೇಮಿರಾಜ ನಾಯ್ಕ್ ಅವರು ಚಾಲನೆ ನೀಡಿದರು. ಮೇಳದಲ್ಲಿ ಟಯೋಟ ಕಿರ್ಲೋಸ್ಕರ್, ಬೆಂಗಳೂರು, ಬಿ.ಎಮ್.ಎಮ್ ಇಸ್ಪಾತ್ ಲಿ., ಎಮ್.ಎಸ್.ಪಿ.ಎಲ್ ಲಿ., ಆರ್.ಬಿ.ಎಸ್.ಎಸ್ಎನ್ ಪ್ರೈ.ಲಿ., ಕೆ.ಕೆ.ಆರ್.ಟಿ.ಸಿ, ದೀಪ ಎಲೆಕ್ಟ್ರೀಕಲ್ ಪ್ರೈ.ಲಿ, ಕಂಪನಿಯ ಕೈಗಾರಿಕ ಪ್ರತಿನಿಧಿಗಳು ಭಾಗವಹಿಸಿದ್ದರು. ಸಂದರ್ಶನನೀಡಿದ ಸುಮಾರು 105 ಐಟಿಐ ಅಭ್ಯರ್ಥಿಗಳಲ್ಲಿ 88 ಜನರು ವಿವಿಧ ಕಂಪನಿಗಳಲ್ಲಿ ಅಪ್ರೆಂಟಿಶಿಪ್ ತರಬೇತಿಗೆ ಆಯ್ಕೆಗೊಂಡರು.

ಸರಕಾರಿ, ಅನುದಾನಿತ, ಖಾಸಗಿ, ಕೈಗಾರಿಕ ತರಬೇತಿ ಸಂಸ್ಥೆಗಳ ಪ್ರಾಚಾರ್ಯರುಗಳು, ಸಿಬ್ಬಂದಿ ವರ್ಗ ಹಾಗೂ ಐಟಿಐ ಪೂರ್ಣಗೊಂಡ ತರಬೇತಿದಾರರು ಭಾಗವಹಿಸಿದ್ದರು.

# ನ.22ರಿಂದ ರಕ್ತಹೀನತೆ ಮುಕ್ತ ಪೌಷ್ಠಿಕ ಕರ್ನಾಟಕ ಕಾರ್ಯಕ್ರಮ: ಡಿ.ಹೆಚ್.ಓ



**ಹಂಪಿ ಟೈಮ್ಸ್ ಹೊಸಪೇಟೆ**

ಆರೋಗ್ಯ ಇಲಾಖೆಯಿಂದ ನ.22ರಿಂದ ವಿಜಯನಗರ ಜಿಲ್ಲೆಯಲ್ಲಿ ರಕ್ತಹೀನತೆ ಮುಕ್ತ ಪೌಷ್ಠಿಕ ಕರ್ನಾಟಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಲ್.ಆರ್.ಶಂಕರ್ ನಾಯ್ಕ್ ಅವರು ಹೇಳಿದರು.

ರಕ್ತಹೀನತೆ ಮುಕ್ತ ಪೌಷ್ಠಿಕ ಕರ್ನಾಟಕ ಕಾರ್ಯಕ್ರಮ ಕುರಿತು ಮಂಗಳವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿಯಲ್ಲಿ ಅವರು ಮಾತನಾಡಿದರು.

ರಾಜ್ಯಾದ್ಯಂತ ನಡೆಯಲಿರುವ 'ರಕ್ತಹೀನತೆ ಮುಕ್ತ ಪೌಷ್ಠಿಕ ಕರ್ನಾಟಕ ಕಾರ್ಯಕ್ರಮ'ಕ್ಕೆ ನ.22ರಂದು ಮುಖ್ಯಮಂತ್ರಿಗಳು ಚಾಲನೆ ನೀಡಲಿದ್ದಾರೆ. ಈ ಅಭಿಯಾನದಡಿ ಆರ್.ಬಿ.ಎಸ್.ಕೆ ತಂಡಗಳ ಮೂಲಕ ಜಿಲ್ಲೆಯ 6 ತಿಂಗಳಿನಿಂದ 18 ವರ್ಷದೊಳಗಿನ ಮಕ್ಕಳಲ್ಲಿ ಅನಿಮಿಯಾವನ್ನು ಗುರುತಿಸಲಾಗುವುದು. ಯಾವುದೇ ಮಕ್ಕಳಲ್ಲಿ ರಕ್ತಹೀನತೆ ಕಂಡುಬಂದಲ್ಲಿ ಅವರಿಗೆ ಸೂಕ್ತ ಚಿಕಿತ್ಸೆ ನೀಡುವ ಉದ್ದೇಶ ಕಾರ್ಯಕ್ರಮದ್ದಾಗಿದೆ ಎಂದು ಹೇಳಿದರು.

ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ. ಜಂಬಯ್ಯ ಅವರು ಮಾತನಾಡಿ, ರಕ್ತಹೀನತೆ ಮುಕ್ತ ಪೌಷ್ಠಿಕ ಕರ್ನಾಟಕ ಕಾರ್ಯಕ್ರಮದಿಂದ ಮಕ್ಕಳಲ್ಲಿರುವ ರಕ್ತಹೀನತೆಯನ್ನು ಕಡಿಮೆ ಮಾಡುವುದರ ಜೊತೆಗೆ ನಮ್ಮ ಜಿಲ್ಲೆ, ರಾಜ್ಯ, ದೇಶವನ್ನು ಸದೃಢವನ್ನಾಗಿಸುವ ಗುರಿ ಹೊಂದಲಾಗಿದೆ. ಆರ್.ಬಿ.ಎಸ್.ಕೆ ತಂಡಗಳು ಜಿಲ್ಲೆಯ ಶಾಲಾ ಕಾಲೇಜುಗಳಲ್ಲಿ ಭೇಟಿ ನೀಡುವ ಸಂದರ್ಭದಲ್ಲಿ ಎಲ್ಲಾ ಪೋಷಕರು ತಮ್ಮ ಮಕ್ಕಳನ್ನು ಕರೆತಂದು, ಆರೋಗ್ಯ ಇಲಾಖೆ ಸಿಬ್ಬಂದಿಯ ಹತ್ತಿರ ರಕ್ತ ಪರೀಕ್ಷೆ ಮಾಡಿಸಬೇಕು. ಮಕ್ಕಳಲ್ಲಿ ರಕ್ತಹೀನತೆ ಕಂಡುಬಂದಲ್ಲಿ ಅವರಿಗೆ ಸೂಕ್ತ ಚಿಕಿತ್ಸೆಯನ್ನು ನೀಡಲು ಇಲಾಖೆಯೊಂದಿಗೆ ಕೈಜೋಡಿಸಬೇಕು. ಈ ಅಭಿಯಾನದಡಿ ಎಲ್ಲಾ ಗರ್ಭಿಣಿ, ಬಾಣಂತಿಯರು, ಗರ್ಭಾವಸ್ಥೆಯಲ್ಲಿರುವ ಮಹಿಳೆಯರನ್ನು ಸಹ ಪರೀಕ್ಷಿಸಿ ಅವರ ಆರೋಗ್ಯ ಸದೃಢತೆಗೂ ಕ್ರಮ ವಹಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ ದೊಡ್ಡಮನಿ ಸೇರಿದಂತೆ ಮತ್ತಿತರರಿದ್ದರು.

# ಕ್ರೀಡೆಯಲ್ಲಿ ಸಾಧನೆ ಸಾಧಕರ ಸ್ವತ್ತು

**ಕಾಲೇಜ್ ಆಡಳಿತ ಮಂಡಳಿ ಅಧ್ಯಕ್ಷರು ಸಿದ್ದರಾಮ ಕಲ್ಮಠ ಹೇಳಿಕೆ**

**ಹಂಪಿ ಟೈಮ್ಸ್ ಕೊಟ್ಟೂರು**

ಕ್ರೀಡೆಯಲ್ಲಿ ಸಾಧನೆ ಎಂಬುದು ಸಾಧಕರ ಸ್ವತ್ತು,ಕ್ರೀಡಾಪಟುಗಳಿಗೆ ಸೋಲು ಗೆಲವು ಸಾಮಾನ್ಯ ಆದರೆ ಕ್ರೀಡೆಯಲ್ಲಿ ಆಸಕ್ತಿ ವಹಿಸಿ ಪಾಲ್ಗೊಳ್ಳುವುದು ಕ್ರೀಡಾಪಟುವಿನ ಮುಖ್ಯ ಪಾತ್ರವಾಗಿರುತ್ತೆ ಎಂದು ಕಾಲೇಜ್ ಆಡಳಿತ ಮಂಡಳಿ ಅಧ್ಯಕ್ಷರು ಸಿದ್ದರಾಮ ಕಲ್ಮಠ ಹೇಳಿದರು.



ಮಂಗಳವಾರ ಪಟ್ಟಣದ ಕೊಟ್ಟೂರೇಶ್ವರ ಮಹಾವಿದ್ಯಾಲಯಲ್ಲಿ ಆಯೋಜಿಸಿದ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಅಂತರ ಕಾಲೇಜುಗಳ ಟೇಬಲ್ ಟೆನಿಸ್ ಪಂದ್ಯಾವಳಿ ಮತ್ತು ವಿಶ್ವವಿದ್ಯಾಲಯದ ತಂಡದ ಆಯ್ಕೆಯನ್ನು ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರಾಚಾರ್ಯರಾದ ಡಾ. ಎಂ . ರವಿಕುಮಾರ್ ಕ್ರೀಡೆಯಿಂದ ವಿದ್ಯಾರ್ಥಿಗಳು ದೈಹಿಕ ಹಾಗೂ ಮಾನಸಿಕವಾಗಿ ಆರೋಗ್ಯವಂತರಾಗುವುದರ ಜೊತೆಗೆ ಕ್ರೀಡೆಯು ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸನ್ನು ನಿರ್ಮಿಸುತ್ತದೆ ಹಾಗೆ ಉತ್ತಮ ಭಾವಿ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯವಿದೆ ಎಂದರು.

ಈ ಪಂದ್ಯಾವಳಿಯಲ್ಲಿ ಪುರುಷರ ವಿಭಾಗದಲ್ಲಿ 5 ತಂಡಗಳು ಮಹಿಳಾ ವಿಭಾಗದಲ್ಲಿ 3 ತಂಡಗಳು ಭಾಗವಹಿಸಿದ್ದರು. ಪುರುಷರ ವಿಭಾಗದಲ್ಲಿ ಕೊಟ್ಟೂರೇಶ್ವರ ಮಹಾವಿದ್ಯಾಲಯ ತಂಡವು ಪ್ರಥಮ ಸ್ಥಾನವನ್ನು ಪಡೆದು ವಿಶ್ವವಿದ್ಯಾಲಯದ ಚಾಂಪಿಯನ್ ಗಳಾಗಿ ಹೊರಹೊಮ್ಮಿದರು.

ದ್ವಿತೀಯ ಸ್ಥಾನವನ್ನು ಸರಳಾದೇವಿ ಕಾಲೇಜ್ ಬಳ್ಳಾರಿ ವಿದ್ಯಾರ್ಥಿಗಳು ಪಡೆದುಕೊಂಡರು. ಹಾಗೂ ಮಹಿಳಾ ವಿಭಾಗದಲ್ಲಿ ಎಸ್ .ಡಿ. ಕಾಲೇಜ್ ಕೊಪ್ಪಳ ಪ್ರಥಮ ಸ್ಥಾನ ಪಡೆದರೆ, ಎಸ್.ಎ.ವಿ.ಟಿ ಕೂಡ್ಲಿಗಿ ದ್ವಿತೀಯ ಸ್ಥಾನ ಪಡೆದುಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಪುರುಷರ ಮತ್ತು ಮಹಿಳೆಯರ ಟೇಬಲ್ ಟೆನಿಸ್ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು.

ಈ ಕಾರ್ಯಕ್ರಮದ ವೇದಿಕೆಯಲ್ಲಿ ಆಡಳಿತ ಮಂಡಳಿಯ ಸದಸ್ಯರಾದ ಡಿ. ಎಸ್.ಶಿವಮೂರ್ತಿ, ಮಾತನಾಡಿದರು. ಅಡಿಕೆ ಮಂಜುನಾಥಯ್ಯ, ಮಂಜುನಾಥ್ ಮಠಪತಿ, ಕೆ.ಬಿ. ಮಲ್ಲಿಕಾರ್ಜುನ್, ಕೋರಿ ಬಸವರಾಜ್, ವಿವಿಧ ಕಾಲೇಜುಗಳ ದೈಹಿಕ ಶಿಕ್ಷಣ ನಿರ್ದೇಶಕರುಗಳಾದ ಕೊಟ್ರೇಶ ಹರಪನಹಳ್ಳಿ ಗುರು ಬಸವರಾಜ್ ವೆಂಕಟೇಶ್ ಹಾಗೂ ವಿಶ್ವವಿದ್ಯಾಲಯ ಪ್ರತಿನಿಧಿ ಹುಲಿರಾಜ್ ಮತ್ತು ನವಾಜ್ ಭಾಷಾ ಉಪಸ್ಥಿತರಿದ್ದರು.

ಮಹಾವಿದ್ಯಾಲಯದ ಉಪನ್ಯಾಸಕರುಗಳಾದ ಪ್ರೊ. ರವೀಂದ್ರ ಗೌಡ, ಪ್ರೊ. ಕೃಷ್ಣಪ್ಪ, ಶ್ರೀಮತಿ ವಿಜಯಲಕ್ಷ್ಮಿ, ಪ್ರೊ. ಬಿ. ಎಸ್. ಪಾಟೀಲ್, ಬಸವರಾಜ್ ಬಣಕಾರ್ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು. ದೈಹಿಕ ನಿರ್ದೇಶಕರಾದ ಡಾ. ಶಿವಕುಮಾರ, ಪ್ರಭಾಕರ್, ರೇವಣ್ಣ ನಿರ್ವಹಿಸಿದರು.

# ಸ್ವಗ್ರಾಮ ಬೆಳವಣಿಗೆಗೆ ಆದ್ಯತೆ ನೀಡಿ

**ಬ್ಯಾಂಕ್ ಮ್ಯಾನೇಜರ್ ಬಾಲಕೃಷ್ಣಭಟ್ ಹೇಳಿಕೆ । ಪಿ.ಡಿ.ಐ.ಟಿಯಲ್ಲಿ ಉದ್ಯಮಶೀಲತಾ ಜಾಗೃತಿ ಕಾರ್ಯಕ್ರಮ**

**ಹಂಪಿ ಟೈಮ್ಸ್ ಹೊಸಪೇಟೆ**

ಗ್ರಾಮಗಳಲ್ಲಿಯುವಜನತೆಉದ್ಯಮಶೀಲರಾದಾಗ ಗ್ರಾಮಗಳು ಅಭಿವೃದ್ಧಿ ಹೊಂದುತ್ತವೆ. ಜನತ ಆರ್ಥಿಕ ಪರಿಸ್ಥಿತ ಸುಧಾರಿಸಲಿದೆ ಎಂದು ಎಸ್.ಬಿ.ಐ.ನ ಲೀಡ್ ಬ್ಯಾಂಕ್ ಮ್ಯಾನೇಜರ್ ಬಾಲಕೃಷ್ಣಭಟ್ ಅಭಿಪ್ರಾಯಪಟ್ಟರು.

ನಗರದ ವೀರಶೈವ ವಿದ್ಯಾವರ್ಧಕ ಸಂಘದ ಪ್ರೌಢದೇವರಾಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಂಗಳವಾರ ಹುಬ್ಬಳ್ಳಿಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯದ (ಎಂ.ಎಸ್.ಎಂ.ಇ) ಡೆವಲಪ್ಮೆಂಟ್ ಅಂಡ್ ಫೆಸಿಲಿಟೇಶನ್ ಇಲಾಖೆ, ವಿಜಯನಗರ ಜಿಲ್ಲೆಯ ಜಿಲ್ಲಾ ವಾಣಿಜ್ಯ ಕೇಂದ್ರ ಹಾಗೂ ಹೊಸಪೇಟೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಡಿಸ್ಟಿಕ್ ಲೀಡ್ ಬ್ಯಾಂಕ್‌ನ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಪ್ಲೇಸ್‌ಮೆಂಟ್ ಸೆಲ್‌ನ ವತಿಯಿಂದ ಹಮ್ಮಿಕೊಂಡಿದ್ದ ಉದ್ಯಮಶೀಲತಾ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಣ್ಣ ಕೈಗಾರಿಕೆ, ಬೀದಿಬದಿ ವ್ಯಾಪಾರಿಗಳಿಗೆ ಸಾಲ ಸೌಲಭ್ಯ ಹೀಗೆ ಮುಂತಾದ ಕೌಶಲ್ಯ ಅಭಿವೃದ್ಧಿಯ ಬಿಸಿನೆಸ್ ಮತ್ತು ಸ್ಟಾರ್ಟ್ ಅಪ್‌ಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಲವಾರು ಯೋಜನೆಗಳು ಅನುದಾನವನ್ನು ಕೊಡುತ್ತವೆ. ಗ್ರಾಮೀಣಾಭಿವೃದ್ಧಿಯಿಂದ ದೇಶದ ಆರ್ಥಿಕತೆ ಬೆಳೆಯುತ್ತದೆ. ಸ್ವಗ್ರಾಮದ ಜನರನ್ನು ಮೇಲೆ ತರುವ ಕೆಲಸ ಮಾಡಿದರೆ ಅದೇ ಮನುಷ್ಯನ ಜೀವನದ ಯಶಸ್ಸು ಎಂದು ಅಭಿಪ್ರಾಯಪಟ್ಟರು.



ಎಂ.ಎಸ್.ಎಂ.ಇ.ಯ ಡೆವಲಪ್ಮೆಂಟ್ ಅಂಡ್ ಫೆಸಿಲಿಟೇಶನ್ ಇಲಾಖೆಯ ಸಹ ನಿರ್ದೇಶಕರಾದ ದೋನೆ ಕಿರಣ್ ಕುಮಾರ್, ಪಿ.ಡಿ.ಐ.ಟಿ.ಯ ಪ್ರಾಂಶುಪಾಲರಾದ ಡಾ.ಯು.ಎಂ.ರೋಹಿತ್ ವಿಜಯನಗರ ಜಿಲ್ಲಾ ಪಂಚಾಯತ್‌ನ ಯಂಗ್ ಪ್ರೊಫೆಶನಲ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಪ್ರೀತಂ ಸಿ.ಜಿ. ಮಾತನಾಡಿದರು. ಕೈಗಾರಿಕಾ ವಿಸ್ತರಣಾ ಅಧಿಕಾರಿಯಾದ ಮೊಹಮ್ಮದ್ ತಾಸೀಮ್ ರಾಜ್ಯ ಸರ್ಕಾರದ ಯೋಜನೆಗಳನ್ನು ವಿವರಿಸಿದರು. ಅನುಪಮ ಪ್ರಾರ್ಥಿಸಿದರು, ಪ್ರೊ. ರೂಪಾನಂದ್ ಸ್ವಾಗತಿಸಿದರು. ಪ್ರೊ.ಇಂದಿರಾ ನಿರೂಪಿಸಿದರು. ಪ್ರೊ. ಸುಮಾ ಜಿ.ಸಿ. ವಂದಿಸಿದರು. ಪ್ಲೇಸ್ಮೆಂಟ್ ಆಫೀಸರ್‌ಗಳಾದ ಡಾ. ಪ್ರತಾಪ್ ಕುಲಕರ್ಣಿ ಹಾಗೂ ಪ್ರೊ. ಮಾಲತೇಶ್. ಕೆ ಮತ್ತು ಪ್ರಾಧ್ಯಾಪಕ ವೃಂದ ಹಾಗೂ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗಹವಹಿಸಿದ್ದರು.


ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

## ಕವಿ ಮನಸು

### ಸಂಕತನ

ಆಕೆ ನಡೆದು
ಸಾಗಿದ ಹೆಜ್ಜೆಗಳ ಅನುಸರಿಸುತ್ತಿರುವೆ
ಒಮ್ಮೆ ಲಯದಲ್ಲಿ
ಮತ್ತೊಮ್ಮೆ ನಡೆಯಲಾಗದೆ ಲಯ ತಪ್ಪಿ
ಕುಸಿದು ಬಿಡುವೆ

ಕಣ್ಮುಚ್ಚಿ ಮನದ ಕೈಗಳಿಂದ ಹೆಜ್ಜೆಗಳನ್ನು
ಸ್ಪರ್ಶಿಸುತ್ತೇನೆ ಭೂಮಿಯ ಆಳಕಿಳಿದ
ಭಾರವಾದ ಹೆಜ್ಜೆಗಳವು

ಸಂಕತನಗಳ ಹೊತ್ತು
ನಡೆವಾಗ ಒಡೆದ ಪಾದಗಳ
ಬಿರುಕುಗಳಿಂದ ಹರಿದ ರಕ್ತದ ಕಮಟು
ಮೂಗಿಗೆ ರಾಚುತ್ತಲೇ ಮೈ ಮನವೆಲ್ಲ
ಅವರಿಸಿ ನಾನು 'ಆಕೆ' ಆಗಿಬಿಡುವೆ.

'ಆಕೆ'ಯಾದ ನಾನು ಮತ್ತೆ ನಡೆವೆ
ಅದೇ ಹೆಜ್ಜೆಗಳಗುಂಟ
ಅದೇ ಲಯ, ರಕ್ತದ ಅದೇ ಕಮಟು
ಮತ್ತೆ ಮತ್ತೆ ಆವರಿಸುತ್ತ ನಡೆಯುತ್ತಲೆ
ಇದ್ದೇನೆ

ಆಕೆಯ ಹೆಗಲೀಗ ನನ್ನದಾಗಿದೆ
ಅದೇ ಭಾರ ಹೊತ್ತ ಭಾವ
ಮತ್ತೊಂದು ಹೆಗಲಿಗೆ ಮುಟ್ಟಿಸುವ
ಹೊಣೆ ಹೊತ್ತು
ಸಾಗುತ್ತಿದ್ದೇನೆ ಮತ್ತೊಂದು ತಿರುವಿನೆಡೆಗೆ
ಭಾರದ ಹೆಜ್ಜೆಗಳನ್ನಿಡುತ್ತ
ಲಯ ತಪ್ಪದೆ, ಒಡೆದ ಪಾದಗಳ
ಸಂಧುಗಳಿಂದ ರಕ್ತ ಸ್ರವಿಸುತ್ತಿದೆ– ಹಿಂದೆ
ಬರುವವರಿಗದು ಗುರುತಾಗಲಿ

। ಭಾರತಿ ಅಶೋಕ್







## ತುಂಗಭದ್ರಾ ನೀರಿನ ಮಟ್ಟ



| ಮಂಗಳವಾರ : 21-11-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1598.94 ಅಡಿ |
| ಒಳ ಹರಿವು | 298 ಕ್ಯುಸೆಕ್ |
| ಹೊರ ಹರಿವು | 9642 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 20.185 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1630.68 ಅಡಿ |
| ಒಳ ಹರಿವು | 2518 ಕ್ಯುಸೆಕ್ |
| ಹೊರ ಹರಿವು | 8459 ಕ್ಯುಸೆಕ್ |
| ಸಾಮರ್ಥ್ಯ | 96.648 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಶೋಧನೆ ಇಲ್ಲದ ಸಂಶೋಧನೆಗೆ ಸೋಲು

### ರಾಯಚೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಹರೀಶ್ ರಾಮಸ್ವಾಮಿ ಅಭಿಮತ | ಯು.ಜಿ.ಸಿ. ಪಿಎಚ್‌ಡಿ. ಕೋರ್ಸ್‌ವರ್ಕ್ ಸಂಶೋಧನ ಸಮಾವೇಶ



■ **ಹಂಪಿ ಟೈಮ್ಸ್ ಹೊಸಪೇಟೆ**

ಸಂಶೋಧನೆ ಎನ್ನುವುದು ಒಂದು ಸೃಜನಾತ್ಮಕ ಕಲೆಯಾಗಿದೆ. ಸಂಶೋಧನೆಗಳಿಂದ ಸಮಾಜದ ಮೇಲೆ ಎಷ್ಟರಮಟ್ಟಿಗೆ ಪರಿಣಾಮ ಬೀರಿದೆ, ಅದರಿಂದ ಸಂಬಂಧಿಸಿದ ಕ್ಷೇತ್ರಕ್ಕೆ ಎಷ್ಟು ಅನುಕೂಲವಾಗಿದೆ ಎನ್ನುವುದರ ಮೇಲೆ ಸಂಶೋಧನೆಯ ಗುಣಮಟ್ಟ ಕಾಣಬಹುದು. ಆದರೆ ಪ್ರಸ್ತುತ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸಮೂಹ ಪಿಎಚ್‌ಡಿ ಉತ್ಪಾದನೆಗಳಿಂದ ನಾವು ಸೋಲನ್ನು ಅನುಭವಿಸು ತ್ತಿರುವುದು ವಿಷಾದನೀಯ ಸಂಗತಿ ಎಂದು ರಾಯಚೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಹರೀಶ್ ರಾಮಸ್ವಾಮಿ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ಅಧ್ಯಯನಾಂಗದ ವತಿಯಿಂದ ಹಮ್ಮಿಕೊಂಡಿದ್ದ ಯು.ಜಿ.ಸಿ. ಪಿಎಚ್‌ಡಿ. ಕೋರ್ಸ್‌ವರ್ಕ್ ಸಂಶೋಧನ ಸಮಾವೇಶವನ್ನು ಉದ್ಘಾಟಿಸಿ ಸಮಾಜ ವಿಜ್ಞಾನ ಸಂಶೋಧನೆ ವಿಷಯದ ಕುರಿತು ಮಾತನಾಡಿದ ಅವರು, ಸಮಾಜವಿಜ್ಞಾನ ಕ್ಷೇತ್ರವು ಬಹಳಷ್ಟು ಟೀಕೆಗೆ ಒಳಪಟ್ಟ ಕ್ಷೇತ್ರವಾಗಿದ್ದು. ಸಮಾಜ ವಿಜ್ಞಾನಗಳ ಸಂಶೋಧಕರು ಸಂಶೋಧನಾ ಅಧ್ಯಯನದ ತತ್ವ, ಸಿದ್ಧಾಂತ, ವಿಧಾನ, ಗುಣಮಟ್ಟವನ್ನು ರೂಢಿಸಿಕೊಳ್ಳದೇ ತಮ್ಮದೇಆದದೇಶಿಸಿದ್ಧಾಂತವನ್ನುಮಂಡಿಸುತ್ತಿರುವುದು ಶೋಚನೀಯ. ಇದರಿಂದ ಸಮಾಜಕ್ಕೆ ಸೂಕ್ತವಾದ ನಿರ್ದೇಶನ ನೀಡಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಮೂಲಕಾರಣ ನಮ್ಮ ಸಂಶೋಧನಾ ವಿಧಾನ ಹಾಗೂ ಅನುಭವದಲ್ಲಿ ಲೋಪದೋಷಗಳಿವೆ ಎಂದು ಸಂಶೋಧಕರು ತಿಳಿದುಕೊಳ್ಳಬೇಕಿದೆ. ಸಮಾಜ ವಿಜ್ಞಾನದಲ್ಲಿ ತರ್ಕಬದ್ಧತೆ ತುಂಬಾ ಮುಖ್ಯವಾಗಿದ್ದು. ಸಂಶೋಧಕರು ಓದುವ ಹವ್ಯಾಸವನ್ನು ರೂಢಿಸಿಕೊಂಡು ಜ್ಞಾನದ ಪರೀಕ್ಷೆಗೆ ಇಳಿಯಬೇಕು. ನಾವು ಬಳಸುವ ವ್ಯಾಖ್ಯ ರಚನೆ ಹೇಗಿರುತ್ತದೆ ಎನ್ನುವುದರ ಮೇಲೆ ನಮ್ಮ ಪ್ರಬಂಧದ ಯಶಸ್ಸು ಅಡಗಿರುತ್ತದೆ. ಸಂಶೋಧನಾ ವಿಧಾನಸರಿಯಿಲ್ಲದಿದ್ದರೆಪ್ರಬಂಧಪರಿಪೂರ್ಣವಾಗಲೂ ಸಾಧ್ಯವಿಲ್ಲ. ಸಂಶೋಧನೆ ಎನ್ನುವುದು ಸರ್ವಕಾಲಿಕವಾದದ್ದು, ವಿಶ್ವವಿದ್ಯಾಲಯಗಳು ಯು.ಜಿ.ಸಿ., ಪಿಎಚ್‌ಡಿ. ಕೋರ್ಸ್‌ವರ್ಕ್‌ಗಳ ಜೊತೆಗೆ ಗಣಿತಶಾಸ್ತ್ರ ಹಾಗೂ ಅಂಕಿಸಂಖ್ಯಾಶಾಸ್ತ್ರಗಳ ಕುರಿತು ತರಬೇತಿ ನೀಡಿದಾಗ ಗುಣಮಟ್ಟದ ಸಂಶೋಧನೆಗಳು ಹೊರಬರುತ್ತವೆ. ಮುಖ್ಯವಾಗಿ ಸಂಶೋಧಕನಿಗೆ ತಾತ್ವಿಕ ನಿಲುವು ಅಗತ್ಯ. ನಾವು ಸಂಶೋಧನೆಗೆ ಸಿದ್ಧಾಂತಗಳನ್ನ ರೂಢಿಸಿಕೊಂಡು ಅವುಗಳನ್ನ ಪರೀಕ್ಷೆಗೆ ಒಳಪಡಿಸಿಕೊಳ್ಳಬೇಕು, ಕ್ಷೇತ್ರಕಾರ್ಯದ ಮೂಲಕ ಹೆಚ್ಚು ಸಂಶೋಧನ ಅನುಭವ ವೃದ್ಧಿಯಾಗುತ್ತದೆ ಆಗ ಹಂತ–ಹಂತವಾಗಿ ಜ್ಞಾನ ಸಂಗ್ರಹವಾಗುವುದರ ಜೊತೆಗೆ ಸಮಾಜಕ್ಕೆ ಉತ್ತಮ ಸಂಶೋಧನೆಗಳನ್ನ ನೀಡಬಹುದು ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಬಸವರಾಜ ಕಲ್ಗುಡಿ ಅವರು ಸಾಹಿತ್ಯ ಸಂಶೋಧನೆ ವಿಷಯದ ಕುರಿತು ಮಾತನಾಡುತ್ತ, ಸಂಶೋಧನೆಯಲ್ಲಿ ಭೌತಿಕ ನಿಲುವು ಇರಬೇಕು. ಸಮಾಜವಿಜ್ಞಾನಗಳ ಶಿಸ್ತು ಸಾಹಿತ್ಯ ಸಂಶೋಧನೆಯಲ್ಲಿ ಒಳಪಟ್ಟಿದೆ ಎಂದು ಪ್ರಶ್ನೆ ನನ್ನನ್ನು ಕಾಡುತ್ತಿದೆ. ಆಧುನಿಕ ಕಾಲದಲ್ಲಿ ಕನ್ನಡ ಭಾಷೆ ಉಳಿವಿಗಾಗಿಸಂಶೋಧನೆವಿನ್ಯಾಸವುಮಾರ್ಪಡಬೇಕಿದೆ. ಸ್ವಾತಂತ್ರ್ಯ ಪೂರ್ವದ ಸಂಶೋಧನೆಗಳ ಕನ್ನಡ ಸಾಹಿತ್ಯದ ಆಕಾರಗಳ ಹುಡುಕುವಿಕೆಯಿಂದ ಆರಂಭವಾಗಿದ್ದು ಕನ್ನಡ ಮತ್ತು ಕರ್ನಾಟಕ ಎಂಬುದರ ಮೇಲೆ ತಾತ್ವಿಕವಾದ ಅಧ್ಯಯನ ನಡೆಯಿತು. ನೆಲ ಮೂಲದ ವಿನ್ಯಾಸ ಮರೆತ್ತಿದ್ದರಿಂದಲೇ ಸಂಶೋಧನಾ ಚಹರೆ ಕಳೆದುಕೊಳ್ಳುವಂತಾಯಿತು. ವಾಸ್ತವವಾಗಿ ಕನ್ನಡ ಸಾಹಿತ್ಯ ಮಾನವಕುಲಕ್ಕೆ ಕೊಡುವುದು ಏನೂ ಇಲ್ಲ ಎಂಬ ಚರ್ಚೆ ಹುಟ್ಟುಹಾಕಿದೆ. ಪಂಪನ ಆದಿಪುರಾಣವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಜೈನಧರ್ಮ ಇನ್ನೊಂದು ತೆರೆನಾದ ಕಥನವನ್ನು ತಿಳಿಸಿಕೊಡುತ್ತದೆ. ಕಾವ್ಯ ಹಾಗೂ ಸಾಹಿತ್ಯ ಓದನ್ನು ಇನ್ನೊಂದಕ್ಕೆ ಸಾಧನವಾಗಿ ಬಳಸದೆ ಅದನ್ನ ಮೂಲ ನೆಲೆಯಾಗಿ ನೋಡಬೇಕಾಗುತ್ತದೆ. ಶಾಸನಗಳು ಎಷ್ಟರಮಟ್ಟಿಗೆ ಸತ್ಯವನ್ನು ಹೇಳುತ್ತದೆ ಎನ್ನುವ ಪ್ರಶ್ನೆಯನ್ನ ಕೇಳುವರ ಸಂಖ್ಯೆ ತುಂಬಾ ಕಡಿಮೆ, ಶಾಸನಗಳಲ್ಲಿ ಉತ್ಪ್ರೇಕ್ಷೆ ಭಾಷೆ ಹೆಚ್ಚು. ಅಂದು ರಾಜನನ್ನು ಉತ್ಪ್ರೇಕ್ಷಿಸಿ ಶಾಸನಗಳನ್ನ ಬರೆಸುತ್ತಿದ್ದರು ಇಂದು ರಾಜಕಾರಣಿಗಳನ್ನು ವೈಭವೀಕರಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಅಧ್ಯಯನದ ಪಾಠಗಳು ಏಕೆ ಬದಲಾಗುತ್ತಿವೆ ಎನ್ನುವ ಆಲೋಚನೆ ಮಾಡಬೇಕಾದ ಅಗತ್ಯ ನಮ್ಮ ಮುಂದಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ.ಡಿ.ವಿ.ಪರಮಶಿವಮೂರ್ತಿ ಅವರು ಅಧ್ಯಕ್ಷತೆವಹಿಸಿ ಮಾತನಾಡುತ್ತ, ಸಂಶೋಧನೆಗೆ ಸಂಬಂಧಪಟ್ಟ ವ್ಯಾಖ್ಯಾನಗಳನ್ನ ಕಾಲಕ್ಕನುಗುಣವಾಗಿ ನೀಡಲಾಗಿದೆ. ಆದಿಮಾನವನಿಂದಿಡಿದು ನಾಗರಿಕನಾಗುವವರೆಗೂ ಸಂಶೋಧನೆಗಳು ಬುನಾದಿ ಹಾಕಲಾಗಿದೆ. ಮಾನವನ ಶ್ರೇಷ್ಠ ಚಟುವಟಿಕೆಯಲ್ಲಿ ಬೌದ್ಧಿಕ ಚಟುವಟಿಕೆ ಮಹತ್ವವಾದದ್ದು, ಅದರಲ್ಲಿ ಸಂಶೋಧನಾ ಚಟುವಟಿಕೆ ಪ್ರಮುಖವಾಗಿದೆ. ಸಂಶೋಧನಾ ಆಲೋಚನೆಗಳು ಬೇರೆಲ್ಲಕ್ಕಿಂತ ಭಿನ್ನವಾಗಿ ಸೃಷ್ಟಿಸುವ ವಿಧಾನವಾಗಿದೆ. ಸಂಶೋಧನಾರ್ಥಿಗಳ ಭವಿಷ್ಯವನ್ನ ಗಮನದಲ್ಲಿಟ್ಟುಕೊಂಡು ಕನ್ನಡ ವಿಶ್ವವಿದ್ಯಾಲಯವು ಸಂಶೋಧನೆಗೆ ಪೂರಕವಾದ ವಾತಾವರಣ ಸೃಷ್ಟಿಸಿದೆ.

ಈ ಕಾರ್ಯಕ್ರಮದಲ್ಲಿ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ವಿಜಯ್ ಪೂಣಚ್ಚ ತಂಬಂಡ ಅವರು ಸ್ವಾಗತಿಸಿದರು. ಅಧ್ಯಯನಾಂಗದ ನಿರ್ದೇಶಕರಾದ ಡಾ.ಪಿ.ಮಹದೇವಯ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಸನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಅಮರೇಶ್ ಯತಗಲ್ ಅವರು ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಬೋಧಕ–ಬೋಧಕೇತರ ಸಿಬ್ಬಂದಿಗಳು ಹಾಗೂ ಸಂಶೋಧನಾರ್ಥಿಗಳು ಉಪಸ್ಥಿತರಿದ್ದರು.

# ಕಣ್ಣು ಅಂಧರಿಗೆ ಬೆಳಕಾಗಲಿ

### ಉಚಿತ ನೇತ್ರ ತಪಾಸಣೆ ಶಸ್ತ್ರ ಚಿಕಿತ್ಸೆಯಲ್ಲಿ ಡಾ.ಶ್ರೀನಿವಾಸ್ ದೇಶಪಾಂಡೆ ಹೇಳಿಕೆ




■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಕಣ್ಣು ಸುರಕ್ಷಿತವಾಗಿದ್ದರೆ ಸುಂದರ ಜಗತ್ತನ್ನು ವೀಕ್ಷಿಸಬಹುದು, ಮನುಷ್ಯನಿಗೆ ಕಣ್ಣು ಪ್ರಮುಖ ಅಂಗ ಎಂದು ಹೊಸಪೇಟೆಯ ನೇತ್ರ ತಜ್ಞ ಡಾ.ಶ್ರೀನಿವಾಸ್ ದೇಶಪಾಂಡೆ ಹೇಳಿದರು.

ಪಟ್ಟಣದ ರಾಮನಗರದಲ್ಲಿ ಸಪ್ತಗಿರಿ ಆಸ್ಪತ್ರೆ ಮತ್ತು ಲಕ್ಷ್ಮಿ ವೈದ್ಯಾಲಯ ಸಹಯೋಗದೊಂದಿಗೆ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ, ಉಚಿತ ನೇತ್ರ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಎಲ್ಲ ದಾನಗಳಲ್ಲಿ ನೇತ್ರದಾನವೂ ಶ್ರೇಷ್ಠ. ಮಣ್ಣಲ್ಲಿ ಮಣ್ಣಾಗಿ ಹೋಗುವ ದೇಹದಲ್ಲಿನ ಕಣ್ಣು ದೃಷ್ಠಿ ಹೀನರ ಬಾಳಿಗೆ ಬೆಳಕಾಗಬಲ್ಲದೆಂಬುದನ್ನು ಪ್ರತಿಯೊಬ್ಬರು ಅರಿಯಬೇಕು. ಕಣ್ಣಿನ ದಾನದಿಂದ ಅಂಧರಿಗೆ ಹೊಸ ಜಗತ್ತನ್ನು ಸೃಷ್ಠಿಸಿ ಕೊಟ್ಟಂತಾಗುತ್ತದೆ ಎಂದರು.

ಸರ್ಕಾರಿ ಆಸ್ಪತ್ರೆಯ ನೇತ್ರ ತಜ್ಞ ಡಾ.ಶರತ್ ಮಾತನಾಡಿ, ಕಣ್ಣಿನ ಮಹತ್ವ ದೃಷ್ಠಿ ಕಳೆದುಕೊಂಡವರಿಗೆ ಮಾತ್ರ ತಿಳಿಯುತ್ತೆ. ಕಣ್ಣಿನ ಜಾಗೃತಿಯ ಬಗ್ಗೆ ನಿರ್ಲಕ್ಷ್ಯ ಬೇಡ ಎಂದರು. ಡಾ.ಸುಬ್ರಮಣ್ಯ ಪ್ರಾಸ್ತಾವಿಕವಾಗಿ ಮಾತನಾಡಿ, ನೂರಾರು ಜನರು ನೇತ್ರ ತಪಾಸಣೆಗೋಳಪಟ್ಟರು,. ಅದರಲ್ಲಿ 38 ಜನರಿಗೆ ಡಿ.07ರಂದು ಹೊಸಪೇಟೆಯ ಸಪ್ತಗಿರಿ ಚಾರಿಟಬಲ್, ಹ.ಬೊ. ಹಳ್ಳಿಯ ಸಪ್ತಗಿರಿ ಆಸ್ಪತ್ರೆ ಮತ್ತು ಲಕ್ಷ್ಮಿ ವೈದ್ಯಾಲಯ ಸಹಯೋಗದಲ್ಲಿ ಉಚಿತ ನೇತ್ರ ಶಸ್ತ್ರ ಚಿಕಿತ್ಸೆ ಮಾಡಿಸಲಾಗುವುದು ಎಂದು ತಿಳಿಸಿದರು.

ರಮೇಶ್‌ಬಾಬು, ಸರ್ಕಾರಿ ಆಸ್ಪತ್ರೆಯ ಸಿಬ್ಬಂದಿ ಶ್ರೀನಿವಾಸ ರೆಡ್ಡಿ, ಡಿ.ರಮೇಶ್ ಶೆಟ್ಟಿ, ಕೆ.ಶಿವಕುಮಾರ್ ಶೆಟ್ಟಿ, ವಿ.ರಾಘವೇಂದ್ರ, ಬೇಕರಿ ರಾಮು ಸೇರಿದಂತೆ ಇತರರಿದ್ದರು. ಎಚ್.ಎಸ್.ಸೌಮ್ಯ, ಪ್ರಕಾಶ್ ಹಾಗೂ ವಿಶ್ವನಾಥ ನಿರ್ವಹಿಸಿದರು.

# ಅಭಿವೃದ್ಧಿಗೆ ವಿಪುಲ ಅವಕಾಶ



■ **ಹಂಪಿ ಟೈಮ್ಸ್ ಹರಪನಹಳ್ಳಿ**

ಸ್ವಸಹಾಯ ಸಂಘದ ಸದಸ್ಯರ ಆರ್ಥಿಕ ಅಭಿವೃದ್ಧಿಗೆ ವಿಪುಲ ಯೋಜನೆಗಳಿದ್ದು, ಇದನ್ನು ಪ್ರತಿಯೊಬ್ಬ ಸದಸ್ಯರು ಅರಿತು ಎಲ್ಲರೂ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ತಾಲೂಕಿನ ಕೂಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕಹಳ್ಳಿಯಲ್ಲಿ ನರೇಗಾ ಹಾಗೂ ರೇಷ್ಮೆ ಇಲಾಖೆಗಳ ಒಗ್ಗೂಡಿಸುವಿಕೆಯಿಂದ ಎನ್‌ಆರ್‌ಎಲ್‌ಎಂನ ಶ್ರೀ ವಾಲ್ಮೀಕಿ ಮಹಿಳಾ ಸ್ವಸಹಾಯ ಸಂಘದಿಂದ ಅಭಿವೃದ್ಧಿಪಡಿಸಿರುವ ಹಿಪ್ಪುನೇರಳೆ (ರೇಷ್ಮೆ ಸಸಿ) ಸಸಿಗಳನ್ನು ರೈತರಿಗೆ ಮಂಗಳವಾರ ವಿತರಣೆ ಮಾಡಿ ಮಾತನಾಡಿದರು.

ತಾಲೂಕಿನ ಹೊಸಕೋಟೆ, ಕುಣೆಮಾದಿಹಳ್ಳಿ, ಸಾಸ್ವಿಹಳ್ಳಿ, ಹುಣಸೆಹಳ್ಳಿ, ಜಿತ್ತಿನಕಟ್ಟಿ ಗ್ರಾಮಗಳ ರೈತರಿಗೆ ಒಟ್ಟು 9 ಸಾವಿರ ಹಿಪ್ಪು ನೇರಳೆ ಸಸಿ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿಯ ಯೋಜನಾ ನಿರ್ದೇಶಕ ಅಶೋಕ್ ತೋಟದ್, ರೇಷ್ಮೆ ನಿರೀಕ್ಷಕ ನಾಗರಾಜ, ಕಸಬಾ ವಲಯ ಅಧಿಕಾರಿ ಅಭಿಷೇಕ, ಪಿಡಿಒ ಯಮುನಾನಾಯ್ಕ, ಐಇಸಿ ವಸಿಗೇರಪ್ಪ ಚಾಗನೂರು, ತಾಂತ್ರಿಕ ಸಂಯೋಜಕ ನಾಗರಾಜ ನಾಯ್ಕ, ಟಿಪಿಎಂ ಪರಮೇಶ್ವರ್, ನರೇಗಾ ಹಾಗೂ ಎನ್‌ಆರ್‌ಎಲ್ ಸಿಬ್ಬಂದಿ ಮತ್ತು ಸಂಘದ ಸದಸ್ಯರು ಇದ್ದರು.

# ಉಜ್ವಲ ಭವಿಷ್ಯಕ್ಕೆ ಮೊಬೈಲ್ ಓದಿಗಿಂತ ಪುಸ್ತಕ ಹಿಡಿದು ಓದುವುದು ಉತ್ತಮ




■ **ಹಂಪಿ ಟೈಮ್ಸ್ ಕೊಟ್ಟೂರು**

ಮೊಬೈಲ್ ಹಿಡಿದು ಓದುವುದಕಿಂತ,ಪುಸ್ತಕ ಹಿಡಿದು ಓದುವುದು ಉತ್ತಮ,ಪತ್ರಿಕೆಗಳನ್ನು ಸದಾ ಓದುವುದ್ದೇ ಆದರೆ ಪುಸ್ತಕಗಳನ್ನು ಓದುವ ಹವ್ಯಾಸ ತಂತಾನೆ ಮೈಗೂಡುತ್ತೆ ಎಂದು ತಹಶಿಲ್ದಾರ ಅಮರೇಶ್ ಜಿ.ಕೆ ಹೇಳಿದರು.

ಪಟ್ಟಣದ ಭಾಗೀರಥಿ ಮರುಳಸಿದ್ದನಗೌಡ ಕಾಲೇಜಿನಲ್ಲಿ ಸಾರ್ವಜನಿಕ ಗ್ರಂಥಾಲಯದಿಂದ ಏರ್ಪಡಿಸಿದ್ದ 'ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ" ಸಮಾರೋಪ ಸಮಾರಂಭದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶ್ರೀಮತಿ ನಿರ್ಮಲಾ ಶಿವನಗುತ್ತಿ ಪ್ರಾಚಾರ್ಯರು ಅಧ್ಯಕ್ಷತೆ ವಹಿಸಿ ಚೆನ್ನಾಗಿ ಓದಿದವರಲ್ಲಿ, ಇಡೀ ಜಗತ್ತು ಅವರ ಕೈಯಲ್ಲಿ ನೆಲೆಸುತ್ತೆ ಹಾಗೆ ಉತ್ತಮ ಭವಿಷ್ಯ ಅವರಲ್ಲಿ ರೂಪಗೊಳ್ಳುತ್ತೆ ಎಂದರು.

ದೇವರಕೊಳದ ಆನಂದ ಶಿಕ್ಷಣ ಸಂಯೋಜಕರು ವಿದ್ಯಾರ್ಥಿಗಳ ಕಲಿಕೆಯ ಸಮಯ ಬಹಳ ಅಮೂಲ್ಯವಾದದ್ದು, ಈ ಸಮಯವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು. ಮಲ್ಲಪ್ಪ ಗುಡ್ಲಾನೂರ್ ಶಾಖಾ ಗ್ರಂಥಾಲಯ ಅಧಿಕಾರಿ, ಕಾಲೇಜಿನ ವಿದ್ಯಾರ್ಥಿಗಳು ಕೊಟ್ಟೂರು ಸಾರ್ವಜನಿಕ ಸಾರ್ವಜನಿಕ ಗ್ರಂಥಾಲಯಕ್ಕೆ ಬಂದು ಡಿಜಿಟಲ್ ಗ್ರಂಥಾಲಯ ಸದಸ್ಯತ್ವವನ್ನು ಪಡೆದು ಸದಾ ಓದುತ್ತಿರಬೇಕು ಎಂದರು.

ಕಾರ್ಯಕ್ರಮದಲ್ಲಿ ಪಿ ಬಸವನಗೌಡ, ಪರಿಸರ ಪ್ರೇಮಿ ಮತ್ತು ಅಂಬಿಕಾ ಕೆ ಶುಶ್ರೂಶ್ಯಕರು, ಸಮುದಾಯ ಆರೋಗ್ಯ ಕೇಂದ್ರ ಕೊಟ್ಟೂರು ಇವರಿಗೆ . 2023 2024ನೇ ಸಾಲಿನ ಉತ್ತಮ ಓದುಗ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ, ಮುರುಗೇಶ್ ಗೌಡ ತಾಲೂಕು ಅಧ್ಯಕ್ಷರು ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕರ ಸಂಘ ಕೊಟ್ಟೂರು,ಬಾಚೇನಹಳ್ಳಿ ಈಶಪ್ಪ,ನಿವೃತ್ತ ಹಿರಿಯ ಫಾರ್ಮಸಿ ಅಧಿಕಾರಿ. ಶ್ರೀನಿವಾಸ್ ಪತ್ತಾರ, ಮರುಳಪ್ಪ ಉಪನ್ಯಾಸಕರು ಉಪಸ್ಥಿತರಿದ್ದರು. ಕೆ ತೇಜಾ ಪ್ರಾರ್ಥಿಸಿದರು ಅಶ್ವಿನಿ ಡಿ.ಸ್ವಾಗತಿಸಿದರು ಐಶ್ವರ್ಯ ಎಚ್ ನಿರೂಪಿಸಿದರು, ಬಿ ಕಾವ್ಯ ವಂದಿಸಿದರು. ಹಾಗೆ ಸ್ಪರ್ಧಾ ವಿಜೇತ ಮಕ್ಕಳಿಗೆ ಪ್ರಶಸ್ತಿ ಪತ್ರ ಮತ್ತು ಬಹುಮಾನಗಳನ್ನು ವಿತರಿಸಲಾಯಿತು.

# ಅನಂತಮೂರ್ತಿ ಇನ್ನಿಲ್ಲ



**ಸಂಡೂರು:** ಪಟ್ಟಣದ ಬ್ರಾಹ್ಮಣ ಸಮಾಜದ ಮುಖಂಡರಾದ ಅನಂತಮೂರ್ತಿ.ಹೆಚ್.ವಿ (87) ರವರು ಮಂಗಳ ವಾರ ಮಧ್ಯಾಹ್ನ 1.15ಕ್ಕೆ ನಿಧನರಾದರು.

ಸ್ಮಯೋರ್ ಕಂಪನಿಯ ನಿವೃತ್ತ ನೌಕರರಾಗಿದ್ದ ಮೃತರು ಇಬ್ಬರು ಗಂಡು ಮಕ್ಕಳು ಓರ್ವ ಹೆಣ್ಣುಮಗಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಶಾಸಕ ಈ ತುಕಾರಾಂ ಸೇರಿದಂತೆ ಸಮಾಜದ ಬಂಧುಗಳು, ಹಿರಿಯ ನಾಗರಿಕರು ಸಂತಾಪ ಸೂಚಿಸಿದ್ದಾರೆ.


ಅವರ ಅಂತಿಮ ಸಂಸ್ಕಾರವನ್ನು ಪಟ್ಟಣದ ರುದ್ರಭೂಮಿಯಲ್ಲಿ ಬುಧವಾರ ಬೆಳಗ್ಗೆ ಮಾಡಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

**ಸುದ್ದಿ & ಜಾಹೀರಾತಿಗಾಗಿ ಸಂಪರ್ಕಿಸಿ**
**9448633038**

**AFFIDAVIT**

I, **Mr. Gogga Vishwanath Swamy** S/o **Late Gogga Sarabhiah**, Aged about 49 years, R/o H.No.287,288, 31st Ward, Near Deepayana School, N.C.Colony, Hospet-583201, Vijayanagara Dist. My name Gogga Vishwanath Swamy and My Name mentioned in Adhar Card as Gogga Vishwanath Swamy, in my Passport Mentioned as Gogga Vishwanath all the above names are same and belongs to me only. vide affidavit dated 21-11-2023 before Notary H.P.Kallam Bhat at Hosapete-583201




ಹೊಸಪೇಟೆಯಲ್ಲಿ
ಅಶ್ವರೂಢ
ಶ್ರೀ ಬಸವೇಶ್ವರ
ಪುತ್ಥಳಿ ಅನಾವರಣ
ಇವನಾರವ, ಇವನಾರವ,
ಇವನಾರವನೆಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ,
ಇವನಮ್ಮವನೆಂದೆನಿಸಯ್ಯಾ.
ಕೂಡಲಸಂಗಮದೇವಾ
ನಿಮ್ಮ ಮನೆಯ ಮಗನೆಂದೆನಿಸಯ್ಯಾ.
ದಿನಾಂಕ: 22-11-2023
ಸಮಯ: ಬೆಳಿಗ್ಗೆ 10ಕ್ಕೆ
ಸ್ಥಳ: ಸಿದ್ದಿಪ್ರಿಯ ಕಲ್ಯಾಣ ಮಂಟಪ
ಮುಂಭಾಗದ ಶ್ರೀ ಬಸವೇಶ್ವರ ವೃತ್ತ
ಸರ್ವರಿಗೂ ಸುಸ್ವಾಗತ ಕೋರುವವರು
ಸ್ವಾತಿ ಸೌಂಡ್ಸ್ ಅಂಡ್ ಡೆಕೋರೇಟರ್ಸ್
ಸ್ವಾತಿ ಫ್ಲವರ್ ಡೆಕೋರೇಟರ್ಸ್ & ಸಪ್ಲೈಯರ್ಸ್
ಸ್ವಾತಿ ಕಲೆಕ್ಷನ್
ಸ್ವಾತಿ ಇನ್ಫ್ರಾಸ್ಟ್ರಕ್ಚರ್
ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪ, ಹೊಸಪೇಟೆ
ಮದುವೆ, ಗೃಹಪ್ರವೇಶ, ಧಾರ್ಮಿಕ ಹಾಗೂ ಶುಭ ಸಮಾರಂಭ, ಸಭೆಗಳಿಗೆ ಸಂಪರ್ಕಿಸಿ
9448261804, 9742130982


ಹೊಸಪೇಟೆಯಲ್ಲಿ
ಅಶ್ವರೂಢ
ಶ್ರೀ ಬಸವೇಶ್ವರ
ಪುತ್ಥಳಿ ಅನಾವರಣ
ಇವನಾರವ, ಇವನಾರವ,
ಇವನಾರವನೆಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ,
ಇವನಮ್ಮವನೆಂದೆನಿಸಯ್ಯಾ.
ಕೂಡಲಸಂಗಮದೇವಾ
ನಿಮ್ಮ ಮನೆಯ ಮಗನೆಂದೆನಿಸಯ್ಯಾ.
ದಿನಾಂಕ: 22-11-2023 ಸಮಯ: ಬೆಳಿಗ್ಗೆ 10ಕ್ಕೆ
ಸ್ಥಳ: ಸಿದ್ದಿಪ್ರಿಯ ಕಲ್ಯಾಣ ಮಂಟಪ
ಮುಂಭಾಗದ ಶ್ರೀ ಬಸವೇಶ್ವರ ವೃತ್ತ
ಸರ್ವರಿಗೂ ಸುಸ್ವಾಗತ
ಎಂ.ರಾಜಶೇಖರ
ತಾಲೂಕು ಅಧ್ಯಕ್ಷರು,
ವೀರಶೈವ ಲಿಂಗಾಯತ ಪಂಚಮಸಾಲಿ ಸಂಘ,
ಹೊಸಪೇಟೆ, ವಿಜಯನಗರ ಜಿಲ್ಲೆ


/freshiesicecreams
Pure delight in every bite. Savour the freshness of real fruit!
freshies
fruit icecreams
Visit us today!
#9, ISR Road, Beside KLS Hospital, Near Amedkar Circle, Hosapete
Mob: 7036030603
Locate us:


ಹೊಸಪೇಟೆಯಲ್ಲಿ
ಅಶ್ವರೂಢ
ಶ್ರೀ ಬಸವೇಶ್ವರ
ಪುತ್ಥಳಿ ಅನಾವರಣ
ಇವನಾರವ, ಇವನಾರವ,
ಇವನಾರವನೆಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ,
ಇವನಮ್ಮವನೆಂದೆನಿಸಯ್ಯಾ.
ಕೂಡಲಸಂಗಮದೇವಾ
ನಿಮ್ಮ ಮನೆಯ ಮಗನೆಂದೆನಿಸಯ್ಯಾ.
ಸರ್ವರಿಗೂ ಸುಸ್ವಾಗತ
ದಿನಾಂಕ: 22-11-2023 ಸಮಯ: ಬೆಳಿಗ್ಗೆ 10ಕ್ಕೆ
ಸ್ಥಳ: ಸಿದ್ದಿಪ್ರಿಯ ಕಲ್ಯಾಣ ಮಂಟಪ
ಮುಂಭಾಗದ ಶ್ರೀ ಬಸವೇಶ್ವರ ವೃತ್ತ
ಪ್ರಕಾಶ ಜಾಲಿ
ಅಧ್ಯಕ್ಷರು: ನ್ಯಾಷನಲ್ ಬಿ.ಈಡಿ. ಕಾಲೇಜ್,
ನಿರ್ದೇಶಕರು: ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ, ಹೊಸಪೇಟೆ.,
ಮುಖಂಡರು: ವೀರಶೈವ ಲಿಂಗಾಯತ ಸಮಾಜ, ಹೊಸಪೇಟೆ.
ಸಿಟಿ ಮೆಡಿಕಲ್ಸ್ ಹೊಸಪೇಟೆ


ಹೊಸಪೇಟೆಯಲ್ಲಿ
ಅಶ್ವರೂಢ
ಶ್ರೀ ಬಸವೇಶ್ವರ
ಪುತ್ಥಳಿ ಅನಾವರಣ
ದಿನಾಂಕ: 22-11-2023
ಸಮಯ: ಬೆಳಿಗ್ಗೆ 10ಕ್ಕೆ
ಸ್ಥಳ: ಸಿದ್ದಿಪ್ರಿಯ ಕಲ್ಯಾಣ ಮಂಟಪ
ಮುಂಭಾಗದ ಶ್ರೀ ಬಸವೇಶ್ವರ ವೃತ್ತ
ಇವನಾರವ, ಇವನಾರವ,
ಇವನಾರವನೆಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ,
ಇವನಮ್ಮವನೆಂದೆನಿಸಯ್ಯಾ.
ಕೂಡಲಸಂಗಮದೇವಾ
ನಿಮ್ಮ ಮನೆಯ ಮಗನೆಂದೆನಿಸಯ್ಯಾ.
ಸರ್ವರಿಗೂ ಸುಸ್ವಾಗತ
ಸಾಲಿ ಬಸವರಾಜ
ಪ್ರಥಮ ದರ್ಜೆ ಗುತ್ತಿಗೆದಾರರು, ಹೊಸಪೇಟೆ